KARNATAK UNIVERSITY, DHARWAD
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
Exam Confidential Section
ಪರೀಕ್ಷಾ ಗೌಪ್ಯ ವಿಭಾಗ
"NAAC Accredited with "A" Grade 2022"

Pavate Nagar, Dharwad
ಪಾವಟೆನಗರ, ಧಾರವಾಡ

Fax No. 0837-2741928
Tel Ph No. 0836-2215259
Website : www.kud.ac.in

ನಂ:/ಕವಿವಿ/ಪರೀಕ್ಷಾ/ಗೌಪ್ಯ/2024/141 ದಿನಾಂಕ: 04/06/2024

## ಅಧಿಸೂಚನೆ

ವಿಷಯ: ಜುಲೈ/ಅಗಸ್ಟ 2024 ರಲ್ಲಿ ಜರುಗುವ ರಾಷ್ಟ್ರೀಯ ಶಿಕ್ಷಣ ನೀತಿ 2020 (NEP) ಅಡಿಯಲ್ಲಿ ಬರುವ ಎಲ್ಲ ಸ್ನಾತಕ ಪದವಿಯ 2, 4 ಮತ್ತು 6 ನೇ ಸೆಮಿಸ್ಟರ್ (ರೆಗ್ಯುಲರ್/ರಿಪೀಟರ್ಸ್) ಕೋರ್ಸುಗಳಿಗೆ UUCMS ತಂತ್ರಾಂಶದ ಮೂಲಕ ಪರೀಕ್ಷಾ ಫಾರ್ಮ/ಶುಲ್ಕ ತುಂಬುವ ಕುರಿತು.

ಉಲ್ಲೇಖ :ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:04/06/2024

*****

ರಾಷ್ಟ್ರೀಯ ಶಿಕ್ಷಣ ನೀತಿ 2020 ರ (NEP) ಅಡಿಯಲ್ಲಿ ಬರುವ ಎಲ್ಲ ಸ್ನಾತಕ ಪದವಿಗಳ 2, 4 ಮತ್ತು 6 ನೇ ಸೆಮಿಸ್ಟರ್ (ರೆಗ್ಯುಲರ್/ರಿಪೀಟರ್ಸ್) ಪರೀಕ್ಷೆಗಳು ಜುಲೈ/ಅಗಸ್ಟ 2024 ರಲ್ಲಿ ಜರುಗುವವು. ಸದರಿ ಪರೀಕ್ಷೆಗಳ ವಿವರವಾದ ವೇಳಾಪಟ್ಟಿಯನ್ನು ಕವಿವಿ ಅಂತರ್ಜಾಲದಲ್ಲಿ ಹಾಗೂ UUCMS ತಂತ್ರಾಂಶದಲ್ಲಿ ನಂತರ ಪ್ರಕಟಿಸಲಾಗುವುದು.

ಕವಿವಿ ವ್ಯಾಪ್ತಿಯಲ್ಲಿ ಬರುವ ಎಲ್ಲ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರು ವಿದ್ಯಾರ್ಥಿಗಳಿಂದ **UUCMS** ತಂತ್ರಾಂಶದ ಮೂಲಕ ಪರೀಕ್ಷಾ ಫಾರ್ಮ/ಶುಲ್ಕಗಳನ್ನು ತುಂಬಿಸಿಕೊಳ್ಳುವಾಗ ಈ ಕೆಳಗಿನ ವಿವರವಾದ ಸೂಚನೆಗಳನ್ನು ಹಾಗೂ ಕೊನೆಯ ದಿನಾಂಕವನ್ನು ತಪ್ಪದೆ ಗಮನಿಸಬೇಕು.

1. **ದಿನಾಂಕ:04/06/2024** ರಿಂದ ವಿದ್ಯಾರ್ಥಿಗಳು ಪರೀಕ್ಷಾ ಅರ್ಜಿಯನ್ನು **UUCMS** ತಂತ್ರಾಂಶದ ಮೂಲಕ ಪರೀಕ್ಷಾ ಶುಲ್ಕವನ್ನು ಭರಿಸಿ ದಂಡವಿಲ್ಲದೆ ಅರ್ಜಿ ಸಲ್ಲಿಸಲು ಕೊನೆಯ **ದಿನಾಂಕ:18/06/2024.**
2. ವಿದ್ಯಾರ್ಥಿಗಳು **ರೂ.180/-** ಮೊದಲನೆಯ ದಂಡದೊಂದಿಗೆ ಪರೀಕ್ಷಾ ಅರ್ಜಿಯನ್ನು **UUCMS** ತಂತ್ರಾಂಶದ ಮೂಲಕ ಪರೀಕ್ಷಾ ಶುಲ್ಕವನ್ನು ಭರಿಸಿ ಅರ್ಜಿ ಸಲ್ಲಿಸಲು ಕೊನೆಯ **ದಿನಾಂಕ:20/06/2024.**
3. ವಿದ್ಯಾರ್ಥಿಗಳು **ರೂ.200/-** ಎರಡನೆಯ ದಂಡದೊಂದಿಗೆ ಪರೀಕ್ಷಾ ಅರ್ಜಿಯನ್ನು **UUCMS** ತಂತ್ರಾಂಶದ ಮೂಲಕ ಪರೀಕ್ಷಾ ಶುಲ್ಕವನ್ನು ಭರಿಸಿ ಅರ್ಜಿ ಸಲ್ಲಿಸಲು ಕೊನೆಯ **ದಿನಾಂಕ:22/06/2024.**
4. ಪ್ರಾಚಾರ್ಯರು ಎಲ್ಲ ವಿದ್ಯಾರ್ಥಿಗಳ **UUCMS** ತಂತ್ರಾಂಶದ ಮೂಲಕ ಸಲ್ಲಿಸಿದ ಪರೀಕ್ಷಾ ಫಾರ್ಮ ಹಾಗೂ ಶುಲ್ಕದ ವಿವರಗಳನ್ನು ಪರಿಶೀಲಿಸಿ ಯಾದಿಯನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಕೊನೆಯ **ದಿನಾಂಕ:24/06/2024.**

## ವಿಶೇಷ ಸೂಚನೆಗಳು

1. ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯ ಎಲ್ಲ ಮಹಾವಿದ್ಯಾಲಯಗಳು ಪ್ರತಿ ಶೈಕ್ಷಣಿಕ ವರ್ಷಕ್ಕೆ ಸಂಯೋಜನೆಯನ್ನು ಪಡೆಯುವದು ಕಡ್ಡಾಯವಾಗಿರುತ್ತದೆ. ಕೆಲವೊಂದು ಮಹಾವಿದ್ಯಾಲಯಗಳಿಂದ ಸಂಯೋಜನೆಯ ಅಧಿಸೂಚನೆಯನ್ನು ಪಡೆಯದೇ ವಿದ್ಯಾರ್ಥಿಗಳ ಪ್ರವೇಶ ಯಾದಿಯನ್ನು ಹಾಗೂ ವಿದ್ಯಾರ್ಥಿಗಳ ಪರೀಕ್ಷಾ ಅರ್ಜಿಗಳನ್ನು ಪರೀಕ್ಷಾ ವಿಭಾಗಕ್ಕೆ ಸಲ್ಲಿಸಿರುವುದನ್ನು ಗಮನಿಸಲಾಗಿದೆ. ಸಂಯೋಜನೆಯ ಅಧಿಸೂಚನೆಯನ್ನು ಪಡೆಯದೆ ಇದ್ದಲ್ಲಿ ಮಹಾವಿದ್ಯಾಲಯಗಳಲ್ಲಿ ವ್ಯಾಸಂಗ ಕ್ರಮಗಳನ್ನು ಮುಂದುವರೆಸುವುದಕ್ಕೆ/ ವಿಸ್ತರಿಸುವುದಕ್ಕೆ ಮಾನ್ಯತೆ ಇರುವುದಿಲ್ಲ ಹಾಗೂ ಅಂತಹ ಮಹಾವಿದ್ಯಾಲಯಗಳ ವಿದ್ಯಾರ್ಥಿಗಳು ಪರೀಕ್ಷೆಗೆ ಅರ್ಜಿ ತುಂಬಲು ಸಹ ಅರ್ಹರಿರುವುದಿಲ್ಲ. ಆದ್ದರಿಂದ ಪರೀಕ್ಷಾ ಅರ್ಜಿಗಳನ್ನು ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗಕ್ಕೆ ಸಲ್ಲಿಸುವಾಗ ಸಿಡಿಸಿ/ಸಂಯೋಜನೆ ವಿಭಾಗದಿಂದ ಪಡೆದ ಪ್ರಸಕ್ತ ವರ್ಷದ ಸಂಯೋಜನೆಯ ಅಧಿಸೂಚನೆಯನ್ನು ಕಡ್ಡಾಯವಾಗಿ ಲಗತ್ತಿಸುವದು.

ಪು.ತಿ.ನೋ

# ಸೂಚನೆಗಳು

1. UUCMS ತಂತ್ರಾಂಶದ ಮೂಲಕ ವಿದ್ಯಾರ್ಥಿಗಳು ಸಲ್ಲಿಸಿದ ಪರೀಕ್ಷಾ ಅರ್ಜಿಗಳನ್ನು ಸಂಬಂಧಪಟ್ಟ ಮಹಾವಿದ್ಯಾಲಯಗಳ ಪ್ರಾಚಾರ್ಯರು ಈ ಮುಂದಿನ ಷರುತ್ತುಗಳಿಗೆ ಒಳಪಟ್ಟು ಸಹಿ ಮಾಡಬೇಕು. ಪ್ರತಿ ಸೆಮೆಸ್ಟರ ಪ್ರತಿ ವಿಷಯದಲ್ಲೂ ಕನಿಷ್ಠ 75% ಹಾಜರಾತಿಯನ್ನು ಪೂರೈಸದ ವಿದ್ಯಾರ್ಥಿಗಳಿಗೆ ಪರೀಕ್ಷಾ ಅರ್ಜಿ ನಮೂನೆಗಳನ್ನು ರದ್ದುಪಡಿಸುವ ಷರುತ್ತುಗಳಿಗೆ ಒಳಪಟ್ಟಿರುತ್ತದೆ. ಮಹಾವಿದ್ಯಾಲಯಗಳ ಪ್ರಾಚಾರ್ಯರ ಕೋರಿಕೆಯ ಮೇರೆಗೆ ಅಂತಹ ವಿದ್ಯಾರ್ಥಿಗಳ ಪರೀಕ್ಷೆಯ ಪ್ರವೇಶ ಪತ್ರಗಳನ್ನು (ಹಾಲ್ ಟಿಕೆಟ) ಫ್ರೀಜ್ಡ್/ತಡೆಹಿಡಿಯಲಾಗುತ್ತದೆ. ಅಂತಹ ವಿದ್ಯಾರ್ಥಿಗಳಿಗೆ ಅಂತರ್ಜಾಲದಲ್ಲಿ ಭರ್ತಿ ಮಾಡಿದ ಪರೀಕ್ಷಾ ಅರ್ಜಿಯ ಆಧಾರದ ಮೇಲೆ ಪರೀಕ್ಷೆ ಬರೆಯಲು ಅವಕಾಶ ನೀಡುವುದಿಲ್ಲ. ಯು.ಜಿ.ಸಿ ನಿಯಮಗಳ ಪ್ರಕಾರ ವಿದ್ಯಾರ್ಥಿಗಳು ಕಡ್ಡಾಯವಾಗಿ 75% ರಷ್ಟು ಹಾಜರಾತಿಯನ್ನು ಪೂರೈಸಿರಬೇಕು.
2. ಪರೀಕ್ಷಾ ಶುಲ್ಕದ ಜೊತೆಗೆ. ಪ್ರತಿ ವಿದ್ಯಾರ್ಥಿಯು ರೂ.100/- ನ್ನು ಅಂತರ್ಜಾಲದ ಪರೀಕ್ಷಾ ಅರ್ಜಿ ನಮೂನೆಯ ಸಂಸ್ಕರಣೆ (Processing) ಶುಲ್ಕವನ್ನು (ಪ್ರತಿ ಸೆಮೆಸ್ಟರಗೆ), ರೂ.145/-ನ್ನು ಅಂಕಪಟ್ಟಿ ಶುಲ್ಕ ಪಾವತಿಸಬೇಕಾಗುತ್ತದೆ.
3. ಸಂಬಂಧಪಟ್ಟ ಕೋರ್ಸುಗಳ ವಿದ್ಯಾರ್ಥಿಗಳು ಪ್ರೋಜೆಕ್ಟ / ಫೀಲ್ಡ ವರ್ಕ ರಿಪೋರ್ಟ ಮೌಲ್ಯಮಾಪನ/ವೈವಾ ಶುಲ್ಕ ರೂ.535/– ಗಳನ್ನು ಹಾಗೂ ರಿಪೀಟರ್ಸ್ ವಿದ್ಯಾರ್ಥಿಗಳ ಪರೀಕ್ಷಾ ಅರ್ಜಿಯ ಪ್ರಕ್ರೀಯೆ ಶುಲ್ಕ ರೂ.100/– ಗಳು ಕಾರಣಾಂತರಗಳಿಂದ UUCMS ತಂತ್ರಾಂಶದಲ್ಲಿ ಸೇರ್ಪಡೆಯಾಗಿರುವವುದಿಲ್ಲ. ಕಾರಣ, ಮಹಾವಿದ್ಯಾಲಯದ ಪ್ರಾಚಾರ್ಯರು ಅಂತಹ ವಿದ್ಯಾರ್ಥಿಗಳಿಂದ ಎಲ್ಲ ಮೊತ್ತವನ್ನು ಕ್ರೋಢಿಕರಿಸಿ SBI Collect ಆನ್‌ಲೈನ್ ಮುಖಾಂತರ ವಿಶ್ವವಿದ್ಯಾಲಯಕ್ಕೆ ಭರಿಸಲು ಸೂಚಿಸಲಾಗಿದೆ.
4. **ಕರ್ನಾಟಕ ಸರ್ಕಾರವು SSP ಮೂಲಕ SC/ST/Cat-I/IIA/IIB/IIIA/IIIB ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ಅರ್ಹ ವಿದ್ಯಾರ್ಥಿಗಳ ಖಾತೆ ನೇರವಾಗಿ ವರ್ಗಾಯಿಸುವುದರಿಂದ ಅಂತಹ ವಿದ್ಯಾರ್ಥಿಗಳು ಪೂರ್ಣ ಪರೀಕ್ಷಾ ಶುಲ್ಕವನ್ನು ಪಾವತಿಸುವುದು.**
5. ವಿಶ್ವವಿದ್ಯಾಲಯವು ನಿಗದಿಪಡಿಸಿದ ಕೊನೆಯ ದಿನಾಂಕದ ನಂತರ ಬರುವ ಯಾವುದೇ ಪರೀಕ್ಷಾ ಅರ್ಜಿಗಳನ್ನು ತೆಗೆದುಕೊಳ್ಳುವುದಿಲ್ಲ/ಪರಿಗಣಿಸಲಾಗುವದಿಲ್ಲ. ಅಲ್ಲದೆ, UUCMS ಅಂತರ್ಜಾಲದ ಮೂಲಕ ಭರಿಸಿದ ಪರೀಕ್ಷಾ ಅರ್ಜಿ ನಮೂನೆಗಳನ್ನು ವಿದ್ಯಾರ್ಥಿಗಳು ಭರ್ತಿಮಾಡಲು ನೇರವಾಗಿ ಪರೀಕ್ಷಾ ವಿಭಾಗವನ್ನು ಸಂಪರ್ಕಿಸದಿರಲು ವಿದ್ಯಾರ್ಥಿಗಳಿಗೆ ತಿಳಿಸಲು ಎಲ್ಲಾ ಕಾಲೇಜುಗಳ ಪ್ರಾಚಾರ್ಯರಿಗೆ ಸೂಚಿಸಲಾಗಿದೆ.
6. ಮಹಾವಿದ್ಯಾಯದ ಪ್ರಾಚಾರ್ಯರು ಎಲ್ಲ ವಿದ್ಯಾರ್ಥಿಗಳ ಮಾಹಿತಿಯ ಯಾದಿಯೊಂದಿಗೆ ಪರೀಕ್ಷಾ ಅರ್ಜಿಗಳನ್ನು (ಹಾರ್ಡಕಾಫಿ) ಅವಶ್ಯ ದಾಖಲೆಗಳೊಂದಿಗೆ/ನಕಲು (ಝುರಾಕ್ಸ್) ಅಂಕಪಟ್ಟಿಗಳೊಂದಿಗೆ ನೇರವಾಗಿ ಸಂಬಂಧಪಟ್ಟ ಕಚೇರಿ ಅಧೀಕ್ಷಕರು, ಪರೀಕ್ಷಾ ವಿಭಾಗ, ವಿಶ್ವಚೇತನ ಬಿಲ್ಡಿಂಗ್, ಕರ್ನಾಟಕ ವಿಶ್ವವಿದ್ಯಾಲಯ, ಪಾವಟೆನಗರ, ಧಾರವಾಡ-580003 ಗೆ ಅಂಚೆ ಮೂಲಕ ಅಥವಾ ಖುದ್ದಾಗಿ ಮಹಾವಿದ್ಯಾಲಯದವರು ಸಲ್ಲಿಸುವುದು.
7. UUCMS ಮೂಲಕ ಅಂತರ್ಜಾಲದ ಪರೀಕ್ಷಾ ಅರ್ಜಿ ನಮೂನೆಗಳನ್ನು ತುಂಬಿಸುವಾಗ ತಿದ್ದುಪಡಿಯನ್ನು ತಪ್ಪಿಸಲು ಮಹಾವಿದ್ಯಾಲಯದ ಸಿಬ್ಬಂದಿಗಳು ವಿದ್ಯಾರ್ಥಿಗಳಿಗೆ ನಿರ್ದೇಶನ ನೀಡುವುದು ಯಾವುದೇ ತಿದ್ದುಪಡಿಗಳು / ತಪ್ಪುಗಳು ಉಂಟಾದರೆ ಮಹಾವಿದ್ಯಾಲಯಗಳೆ ಜವಾಬ್ದಾರರಾಗಿರುತ್ತಾರೆ.
8. ಪರೀಕ್ಷೆಗೆ ಸಂಬಂದಿಸಿದಂತೆ ಶುಲ್ಕಗಳನ್ನು ವಿಶ್ವವಿದ್ಯಾಲಯಕ್ಕೆ ಭರಣಾ ಮಾಡಿದ ನಂತರ ಯಾವುದೇ ಕಾರಣಕ್ಕೂ ಮರಳಿ ಕೊಡುವದಿಲ್ಲ.
9. ಈಗಾಗಲೇ ಲಿಖಿತ ಪರೀಕ್ಷೆಗಳ ತಾತ್ಕಾಲಿಕ ವೇಳಾಪಟ್ಟಿಯನ್ನು ಪ್ರಕಟಿಸಲಾಗಿದ್ದು, ಏನಾದರೂ ತಿದ್ದುಪಡಿಗಳಿದ್ದಲ್ಲಿ ಕೂಡಲೆ ತಿಳಿಸುವುದು.
10. ರಾಷ್ಟ್ರೀಯ ಶಿಕ್ಷಣ ನೀತಿ 2020 (ಎನ್.ಇ.ಪಿ) ಅಡಿಯಲ್ಲಿ ನೊಂದಣಿ ಮಾಡಿದ (ರೆಗ್ಯುಲರ್/ರಿಪೀಟರ್ಸ್) ವಿದ್ಯಾರ್ಥಿಗಳ ಅಂಕಿ ಅಂಶಗಳನ್ನು ಪದವಿ/ಸೆಮಿಸ್ಟರ್‌ವಾರು ಈ ಅಧಿಸೂಚನೆಯೊಂದಿಗೆ ಲಗತ್ತಿಸಿದ (Annexure A) ಯಲ್ಲಿ ಪ್ರತ್ಯೇಕವಾಗಿ ಸಿದ್ದಪಡಿಸಿ ಹಾರ್ಡ ಕಾಪಿ ಮತ್ತು ಸಾಫ್ಟ್ ಕಾಪಿಯನ್ನು ಪರೀಕ್ಷಾ ಶಾಖೆಯ ಸಂಬಂಧಿಸಿದ ವಿಭಾಗಗಳ ಅಧೀಕ್ಷಕರುಗಳಿಗೆ ಸಲ್ಲಿಸುವುದು.

ಪರೀಕ್ಷಾ ಶುಲ್ಕದ ವಿವರ ಈ ಕೆಳಗಿನಂತಿದೆ.

| ಅ.ನಂ | ವಿವರ | ಶುಲ್ಕ ₹ |
|---|---|---|
| 01 | ಅಂತರ್ಜಾಲದ ಪರೀಕ್ಷಾ ಅರ್ಜಿ ಪ್ರಕ್ರಿಯೆ ಶುಲ್ಕ | 100/- |
| 02 | ಅಂಕಪಟ್ಟಿ ಶುಲ್ಕ ಪರೀಕ್ಷಾ ಶುಲ್ಕ: ಪ್ರೋಜೆಕ್ಟ /ಫೀಲ್ಡ ವರ್ಕ ರಿಪೋರ್ಟ ಮೌಲ್ಯಮಾಪನ/ವೈವಾ ಶುಲ್ಕ | 145/- |
| 03 | ಪರೀಕ್ಷಾ ಶುಲ್ಕ: ಪ್ರೋಜೆಕ್ಟ /ಫೀಲ್ಡ ವರ್ಕ ರಿಪೋರ್ಟ ಮೌಲ್ಯಮಾಪನ/ವೈವಾ ಶುಲ್ಕ (ಸಂಬಂಧಪಟ್ಟ ಪದವಿಗಳಿಗೆ) | 535/- |
| 04 | ಪರೀಕ್ಷಾ ಶುಲ್ಕ: ಬಿ.ಎ./ ಬಿ.ಎಸ್‌ಸಿ. /ಬಿ.ಕಾಂ/ಬಿ.ಎ (ಐ.ಎಲ್.ಆರ್.ಡಿ) 2, 4 ಮತ್ತು 6 ನೇ ಸೆಮೆಸ್ಟರ್<br>1 ಪೇಪರ ₹ 240/-, 2 ಪೇಪರ ₹ 480/-,3 ಪೇಪರ ₹ 720/-, 4 ಕ್ಕಿಂತ ಮೇಲ್ಪಟ್ಟು ಪ್ರತಿ ಸೆಮೆಸ್ಟರಗೆ ₹ 785/- | 785/- |
| | ಪರೀಕ್ಷಾ ಶುಲ್ಕ: ಬಿ.ಎಸ್.ಡಬ್ಲ್ಯೂ 2, 4 ಮತ್ತು 6 ನೇ ಸೆಮೆಸ್ಟರ್.<br>1 ಪೇಪರ ₹ 255/-, 2ಪೇಪರ ₹ 510/-, 3 ಪೇಪರ ₹ 765/-, 4ಕ್ಕಿಂತ ಮೇಲ್ಪಟ್ಟು ಪ್ರತಿ ಸೆಮೆಸ್ಟರಗೆ ₹ 970/- | 970/- |
| | ಪರೀಕ್ಷಾಶುಲ್ಕ:ಬಿಬಿಎ/ಬಿ.ಸಿ.ಎ/ಬಿ.ಕಾಂ.(ಸಿ.ಎಸ್)/ಬಿ.ಎಸ್‌ಸಿ.(ಸಿ.ಎಸ್)/ಬಿ.ಟಿ.ಟಿ.ಎಂ/ಬಿ.ಎ.ಎಸ್.ಎಲ್.ಪಿ/ಬಿ.ಕಾಂ. ಇ-ಕಾಮರ್ಸ ಆಪ್‌ರೇಷನ್/ಬಿಬಿಎ ಲಾಜಿಸ್ಟಿಕ್ಸ್ ಮ್ಯಾನೇಜಮೆಂಟ್ 2, 4 ಮತ್ತು 6 ನೇ ಸೆಮೆಸ್ಟರ್<br>1 ಪೇಪರ ₹ 295/-,2 ಪೇಪರ ₹ 590/-,3ಪೇಪರ ₹ 885/-,4 ಕ್ಕಿಂತ ಮೇಲ್ಪಟ್ಟು ಪ್ರತಿ ಸೆಮೆಸ್ಟರಗೆ ₹ 1040/- | 1040/- |
| | ಪರೀಕ್ಷಾ ಶುಲ್ಕ: ಬಿ.ಎಸ್‌ಸಿ (ಹೋಟೆಲ್ ಮ್ಯಾನೇಜಮೆಂಟ್)- 2, 4 ಮತ್ತು 6 ನೇ ಸೆಮೆಸ್ಟರ್<br>1 ಪೇಪರ ₹ 340/-, 2ಪೇಪರ ₹ 680/-,3 ಪೇಪರ ₹ 1020/-,4 ಕ್ಕಿಂತ ಮೇಲ್ಪಟ್ಟು ಪ್ರತಿ ಸೆಮೆಸ್ಟರಗೆ ₹ 1410/- | 1410/- |
| | ಪರೀಕ್ಷಾ ಶುಲ್ಕ: ಬಿ.ವಿ.ಎ- 2, 4 ಮತ್ತು 6ನೇ ಸೆಮೆಸ್ಟರ್<br>1 ಪೇಪರ ₹ 330/-, 2 ಪೇಪರ ₹ 660/-, 3 ಪೇಪರ ₹ 990/-,4 ಕ್ಕಿಂತ ಮೇಲ್ಪಟ್ಟು ಪ್ರತಿಸೆಮೆಸ್ಟರಗೆ ₹ 1215/- | 1215/- |
| | ಪರೀಕ್ಷಾ ಶುಲ್ಕ: ಬಿ.ಪಿ.ಎ. 2, 4 ಮತ್ತು 6 ನೇ ಸೆಮೆಸ್ಟರ್<br>1 ಪೇಪರ ₹ 275/-,2 ಪೇಪರ ₹ 550/-, 3 ಪೇಪರ ₹ 825/-, 4ಕ್ಕಿಂತ ಮೇಲ್ಪಟ್ಟು ಪ್ರತಿ ಸೆಮೆಸ್ಟರಗೆ ₹ 855/- | 855/- |
| | ಪರೀಕ್ಷಾ ಶುಲ್ಕ: ಬಿ.ಎ.ಎಸ್‌ಸಿ (ಪಲ್ಪ ಮತ್ತು ಪೇಪರ ಸಾಯನ್ಸ/ಎಂಬೆಡೆಡ್) 2, 4 ಮತ್ತು 6 ನೇ ಸೆಮೆಸ್ಟರ್<br>1 ಪೇಪರ ₹ 275/-, 2 ಪೇಪರ ₹ 550/-,3 ಪೇಪರ ₹ 825/-, 4 ಕ್ಕಿಂತ ಮೇಲ್ಪಟ್ಟು ಪ್ರತಿ ಸೆಮೆಸ್ಟರಗೆ ₹ 855/- | 855/- |

ಸದರಿ ಮೇಲಿನ ಅಧಿಸೂಚನೆಯನ್ನು ಎಲ್ಲ ವಿದ್ಯಾರ್ಥಿಗಳ ಗಮನಕ್ಕೆ ತಂದು ಅದರಂತೆ ಪರೀಕ್ಷಾ ಫಾರ್ಮ/ಶುಲ್ಕಗಳನ್ನು ತುಂಬಿಸಿಕೊಳ್ಳುವುದು.

ಕುಲಸಚಿವರು(ಮೌಲ್ಯಮಾಪನ)

ಗೆ,

ಕ.ವಿ.ವಿ. ವ್ಯಾಪ್ತಿಯ ಎಲ್ಲ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ.

**ಪ್ರತಿಗಳು ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ:**

1) ಹಣಕಾಸು ಅಧಿಕಾರಿಗಳು, ಹಣಕಾಸು ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
2) ಅಭಿವೃದ್ಧಿ ಅಧಿಕಾರಿಗಳು, ಅಂಕಿ ಸಂಖ್ಯೆ ವಿಭಾಗ/ ಶಿಷ್ಯವೇತನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
3) ನಿರ್ದೇಶಕರು, ವಿದ್ಯಾರ್ಥಿ ಕಲ್ಯಾಣ ವಿಭಾಗ,/ಎಸ್‌ಸಿ/ಎಸ್‌ಟಿ/ಕೆ-1/ಒಬಿಸಿ ಘಟಕ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
4) ನಿರ್ದೇಶಕರು ಮಾಹಿತಿ ತಂತ್ರಜ್ಞಾನ ವಿಭಾಗ ಕ.ವಿ.ವಿ. ಧಾರವಾಡ. (**ಅಧಿಸೂಚನೆಯನ್ನು ಅಂತರ್ಜಾಲದಲ್ಲಿ ಪ್ರಕಟಿಸುವುದು.**)
5) ಆಪ್ತಕಾರ್ಯದರ್ಶಿಗಳು, ಕುಲಪತಿಗಳು/ಕುಲಸಚಿವರು/ಕುಲಸಚಿವರು(ಮೌಲ್ಯಮಾಪನ)/ವಿತ್ತಾಧಿಕಾರಿಗಳು, ಕವಿವಿ, ಧಾರವಾಡ.
6) ಸಿಸ್ಟಮ್ ಎನಾಲಿಸ್ಟ್, ಪರೀಕ್ಷಾ ಗಣಕಯಂತ್ರ ವಿಭಾಗ, ಕ.ವಿ.ವಿ. ಧಾರವಾಡ.
7) ಉಪಕುಲಸಚಿವರು/ ಸಹಾಯಕ ಕುಲಸಚಿವರು, ಪರೀಕ್ಷಾ/ ಹಣಕಾಸು/ ವಿದ್ಯಾಮಂಡಳ ವಿಭಾಗ, ಕ ವಿ ವಿ, ಧಾರವಾಡ.
8) ಅಧೀಕ್ಷಕರು, ಹಣಕಾಸು/ ವಿದ್ಯಾಮಂಡಳ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
9) ಅಧೀಕ್ಷಕರು, ಗೌಪ್ಯ/ಪ್ರಶ್ನೆಪತ್ರಿಕೆ/ಬಿ.ಎ./ಬಿ.ಕಾಂ./ಬಿ.ಎಸ್.ಸಿ./ಕಾನೂನು/ಘಟಿಕೋತ್ಸವ ಪರೀಕ್ಷಾ ವಿಭಾಗ, ಕವಿವಿ,ಧಾರವಾಡ.

## :NEP Students Strength: (Annexure- 'A')

(Regular+Repeaters+Change of College)

**Name of the college :**

**UUCMS College code:**

**Old College Code :**

**Degree & Semester :**

| Sl | College Name & College code as per UUCMS | Subject Name | UUCMS NEP Subject Code | Total No. of Students (Regular+Repeaters +Change of College) |
|---|---|---|---|---|
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |

Seal & Signature of the Principal
Name:
Mobile No.:

**ಸೂಚನೆ:** ನೋಂದಣಿ ಮಾಡಿದ ನಿಯಮಿತ & ಪುನರಾವರ್ತಿತ ವಿದ್ಯಾರ್ಥಿಗಳ ಅಂಕಿ-ಅಂಶಗಳನ್ನು ಒಟ್ಟುಗೂಡಿಸಿ ವಿಷಯವಾರು ಈ ಮೇಲಿನ ನಮೂನೆ (Annexure 'A') ಯನ್ನು MS Excel ನಲ್ಲಿ ಪ್ರತ್ಯೇಕವಾಗಿ ಪದವಿವಾರು/ಸೆಮಿಸ್ಟರ್‌ವಾರು ತಯಾರು ಮಾಡಿ ಹಾರ್ಡ್‌ಕಾಪಿ & MS Excel ಸಾಫ್ಟ್‌ಕಾಪಿಯನ್ನು ಕವಿವಿ ಪರೀಕ್ಷಾ ಶಾಖೆಯ ಸಂಬಂಧಿತ ಕಲಾ/ವಾಣಿಜ್ಯ/ವಿಜ್ಞಾನ ವಿಭಾಗದ ಅಧೀಕ್ಷಕರು ರವರಿಗೆ ಸಲ್ಲಿಸತಕ್ಕದ್ದು.

- ಕಲಾ ವಿಭಾಗಕ್ಕೆ ಸಲ್ಲಿಸಬೇಕಾದ ಪದವಿಗಳ ಪಟ್ಟಿ:- BA/ BPA/ BSW/ BVA/ BA(ILRD)
  ಕಲಾ ವಿಭಾಗದ ಇಮೇಲ್ ವಿಳಾಸ: basection@kud.ac.in
- ವಾಣಿಜ್ಯ ವಿಭಾಗಕ್ಕೆ ಸಲ್ಲಿಸಬೇಕಾದ ಪದವಿಗಳ ಪಟ್ಟಿ:- BCom/ BBA/ BCom(CS)/ BTTM/e-Commerce/Logistics
  ವಾಣಿಜ್ಯ ವಿಭಾಗದ ಇಮೇಲ್ ವಿಳಾಸ: examcommerce@kud.ac.in
- ವಿಜ್ಞಾನ ವಿಭಾಗಕ್ಕೆ ಸಲ್ಲಿಸಬೇಕಾದ ಪದವಿಗಳ ಪಟ್ಟಿ:- BSc/ BCA/ BASLP/ BSc(P&P)/ BSc (HM)
  ವಿಜ್ಞಾನ ವಿಭಾಗದ ಇಮೇಲ್ ವಿಳಾಸ: examsci.kud@gmail.com